**ದಿನಾಂಕ: 02-12-2015 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಸಮ್ಮೇಳನ ಸಭಾಂಗಣ ಕೊಠಡಿ ಸಂಖ್ಯೆ 334ರಲ್ಲಿ ಜರುಗಿದ ರಾಜ್ಯದ ಪ್ರಮುಖ ಕಾರ್ಯಕ್ರಮಗಳ ಪ್ರಥಮ ಪರಿಶೀಲನಾ ಸಭೆಯ ನಡವಳಿಗಳು**

ಪ್ರಥಮವಾಗಿ ಸರ್ಕಾರದ ಕಾರ್ಯದರ್ಶಿ, ಯೋಜನಾ ಇಲಾಖೆ ರವರು ಸಭಾಧ್ಯಕ್ಷರುಗಳು ಮತ್ತು ಉಪಸ್ಥಿತರಿದ್ದ (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳು) ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಹಾಗೂ ಸಭಾಧ್ಯಕ್ಷರು ಪರಿಶೀಲನೆ ಕೈಗೊಳ್ಳುವಂತೆ ಮನವಿ ಮಾಡಿದರು.

ಆರಂಭಿಕವಾಗಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಕೇಂದ್ರ ಮತ್ತು ರಾಜ್ಯಗಳ ನಡುವಿನ ಅನುದಾನ ಹಂಚಿಕೆ ವಿನ್ಯಾಸವು 50:50 ರಿಂದ 60:40 ರವರೆಗೆ ಬದಲಾವಣೆಗೊಂಡಿದ್ದು, 2015-16ನೇ ಸಾಲಿನ ಅನುದಾನ ಹಂಚಿಕೆಯ ವ್ಯತ್ಯಾಸದ ಮೊತ್ತವನ್ನು ಆರ್ಥಿಕ ಇಲಾಖೆಯು ಕಾಯ್ದಿರಿಸಿಕೊಳ್ಳುವಂತೆ ಹಾಗೂ ರಾಜ್ಯ ಸರ್ಕಾರದಿಂದ ಕಡಿಮೆಗೊಂಡಿರುವ ಅನುದಾನದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿಗೆ ಅನುದಾನವನ್ನು ಕಾಪಾಡಿಕೊಳ್ಳಬೇಕಿದೆ ಎಂದು ಹೇಳಿದರು.

**ಜಲಸಂಪನ್ಮೂಲ ಇಲಾಖೆ**

ಜಲಸಂಪನ್ಮೂಲ ಇಲಾಖೆಯ ಭಾರಿ ನೀರಾವರಿಯ ಕೃಷ್ಣ ಭಾಗ್ಯ ಜಲ ನೀರಾವರಿ ನಿಗಮ (ಕೆ.ಬಿ.ಜೆ.ಎನ್.ಎಲ್) ಕಾಮಗಾರಿಯೊಂದಿಗೆ ಪ್ರಗತಿ ಪರಿಶೀಲನೆಯು ಆರಂಭಗೊಂಡಿತು. ಕೃಷ್ಣ ಮೇಲ್ದಂಡೆ ಯೋಜನೆ ಹಂತ-III ಕ್ಕೆ ಸಂಬಂಧಿಸಿದಂತೆ ಬಿಡುಗಡೆಯಾದ ಅನುದಾನಕ್ಕೆ ಶೇ.95 ರಷ್ಟು ಖರ್ಚು ಮಾಡಿರುವುದಾಗಿ ಹಾಗೂ AIBP ಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಪ್ರಸಕ್ತ ಸಾಲಿಗೆ ಯಾವುದೇ ಅನುದಾನವನ್ನು ಬಿಡುಗಡೆ ಮಾಡದ ಪ್ರಯುಕ್ತ ಸದರಿ ಯೋಜನೆಯನ್ನು PMKSY ನೊಂದಿಗೆ ವಿಲೀನಗೊಳಿಸಲಾಗಿದೆ ಎಂದು ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು. ನೀರಾವರಿಗಾಗಿ ಒದಗಿಸುವ ನೀರಿನ ಬಳಕೆ ಕರವನ್ನು ವಿಧಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸಲಹೆ ನೀಡಿದರು.

ಕೃಷ್ಣ ಭಾಗ್ಯ ಜಲ ನೀರಾವರಿ ನಿಗಮದ (KBJNL) (ರೂ.857.00 ಕೋಟಿ) ಪರಿಶಿಷ್ಠ ಜಾತಿ ಉಪಯೋಜನೆ/ಗಿರಿಜನ ಉಪಯೋಜನೆಯ (SCSP/TSP) ಕ್ರಿಯಾ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಅನುಮೋದಿಸಿರುವುದಾಗಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಸಭೆಗೆ ಮಾಹಿತಿ ನೀಡಿದರು.

ಪರಿಶಿಷ್ಠ ಜಾತಿ ಉಪಯೋಜನೆ/ಗಿರಿಜನ ಉಪಯೋಜನೆ ಯೋಜನೆಯು ಕೊನೆ ಹಂತದ SC/ST ರೈತರಿಗೂ ತಲುಪುವಂತಾಗಬೇಕೆಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಪ್ರತಿಪಾದಿಸಿದರು.

ಪರಿಶಿಷ್ಠ ಜಾತಿ ಉಪಯೋಜನೆ/ಗಿರಿಜನ ಉಪಯೋಜನೆ (SCSP/TSP) ಕ್ರಿಯಾ ಯೋಜನೆಯ ಪ್ರಗತಿಯು ಮುಂದಿನ ಮಾಹೆಯಿಂದ ಪ್ರಾರಂಭವಾಗುವುದೆಂದು ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು. ಈ ಪೈಕಿ ರೂ. 483.00 ಕೋಟಿಗಳನ್ನು ನಾಲಾ ಕಾಮಗಾರಿಗಾಗಿ

..2

ಹಾಗೂ ರೂ. 374.00 ಕೋಟಿಗಳನ್ನು ವೈಯಕ್ತಿಕ ಕೊಳವೆಬಾವಿಗಳಿಗಾಗಿ ನಿಗಧಿಪಡಿಸಲಾಗಿದೆ. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನೀರಾವರಿ ನಿಗಮರವರು ಮಾತನಾಡುತ್ತಾ, ವೈಯಕ್ತಿಕ ಕೊಳವೆ ಬಾವಿಗಳ ಜೊತೆಗೆ ಹನಿ ನೀರಾವರಿ ಕಾರ್ಯಕ್ರಮವನ್ನು ಈ ಹಣದಲ್ಲಿ ಕೈಗೊಳ್ಳುವುದಾಗಿ ತಿಳಿಸಿದರು. ಪರಿಶಿಷ್ಠ ಜಾತಿ ಉಪಯೋಜನೆ/ಗಿರಿಜನ ಉಪಯೋಜನೆ ಕಾರ್ಯಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿ ಅನುಮೋದನೆಗೊಂಡಿರುವ ಕ್ರಿಯಾ ಯೋಜನೆಯಂತೆ ಕೈಗೊಳ್ಳಲು ಮತ್ತು ವೈಯಕ್ತಿಕ ಕೊಳವೆ ಬಾವಿ/ತೆರದ ಬಾವಿಗಳ ಯೋಜನೆಗಳನ್ನು ಜಿಲ್ಲಾ ಪಂಚಾಯತ್ ಅಥವಾ ಕೃಷ್ಣ ಭಾಗ್ಯ ಜಲ ನೀರಾವರಿ ನಿಗಮದಿಂದ ಅನುಷ್ಠಾನಗೊಳಿಸುವ ತೀರ್ಮಾನದ ಸಂಬಂಧದ ಪ್ರಸ್ತಾವನೆಯ ವಿಷಯವನ್ನು ರಾಜ್ಯ ಪರಿಷತ್ತಿನ ಮುಂದೆ ಮಂಡಿಸುವಂತೆ ಸಲಹೆ ನೀಡಲಾಯಿತು.

**ಲೋಕೋಪಯೋಗಿ ಇಲಾಖೆ**

ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮಾತನಾಡುತ್ತಾ ಇಲಾಖೆಯಿಂದ ಸ್ಥಿರವಾದ ಪ್ರಗತಿಯಾಗುತ್ತಿದ್ದು, ನಿಗಧಿಪಡಿಸಿದ ಗುರಿಯನ್ನು ನಿಗಧಿತ ಅವಧಿಯೊಳಗೆ ಉತ್ತಮ ಪ್ರಗತಿ ಸಾಧಿಸುವುದಾಗಿ ಸಭೆಗೆ ತಿಳಿಸಿದರು. KRDCL ಅನ್ನು ಇಲಾಖೆಯೊಂದಿಗೆ ವಿಲೀನಗೊಳಿಸಲು ಸಚಿವ ಸಂಪುಟ ಟಿಪ್ಪಣಿಯನ್ನು ಕಳುಹಿಸಿಕೊಡಲು ಸಲಹೆ ಮಾಡಲಾಯಿತು.

**ನಗರಾಭಿವೃದ್ಧಿ ಇಲಾಖೆ**

ಅಪರ ಮುಖ್ಯ ಕಾರ್ಯದರ್ಶಿಗಳು ಮಾತನಾಡುತ್ತಾ, ಬೆಂಗಳೂರು ಹೊರಗಿನ ಸುಮಾರು 200 ಪುರಸಭೆಗಳಿಗೆ ಸುರಕ್ಷಿತ ಕುಡಿಯುವ ನೀರನ್ನು ಮುಂದಿನ 5 ವರ್ಷಗಳಲ್ಲಿ ಒದಗಿಸಬೇಕಿದ್ದು, ಇದುವರೆಗೆ ಕೇವಲ 15 ರಿಂದ 17 ಪುರಸಭೆಗಳಿಗೆ ಮಾತ್ರ ಸರಿದೂಗಿಸಲಾಗಿದೆ. ಈ ಪುರಸಭೆಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಸಹ ಹಂತಹಂತವಾಗಿ ಮಾಡಬೇಕಾಗಿದೆ.

ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಚಿಕ್ಕ ಪಾಲಿಕೆಗಳಲ್ಲಿ ನಿವೇಶನಗಳನ್ನು ಗುರುತಿಸಲಾಗಿದೆ ಹಾಗೂ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. KUIDFCಯ ಬಾಕಿ ಬಿಲ್‌ಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಲು ಆರ್ಥಿಕ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆ ಒಟ್ಟಾಗಿ ಸಭೆಯನ್ನು ನಡೆಸಲು ಸಲಹೆ ನೀಡಲಾಯಿತು. ಇದರಿಂದಾಗಿ ಬಹುತೇಕ ಇದೇ ಗುತ್ತಿಗೆದಾರರು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳನ್ನು ನಿರ್ವಹಿಸುತ್ತಿರುವುದರಿಂದ ಗ್ರಾಮೀಣ ಕುಡಿಯುವ ನೀರು ಯೋಜನೆಗಳ ಸಮಸ್ಯೆಗಳನ್ನು ಕಡಿಮೆಗೊಳಿಸಬಹುದಾಗಿದೆ ಎಂದು ತಿಳಿಸಿದರು. ಅನುದಾನವನ್ನು ಆವರ್ತಿಸಿಕೊಳ್ಳಲು KUIDFC ಯ ಸಾಮರ್ಥ್ಯವನ್ನು ಪರಿಶೀಲಿಸಿಕೊಳ್ಳುವಂತೆ ಸಲಹೆ ನೀಡಲಾಯಿತು.

ಸಂಪನ್ಮೂಲವನ್ನು ರೂಢಿಸಿಕೊಳ್ಳಲು ಗ್ರಾಮೀಣ ವಲಯಕ್ಕಿಂತ ನಗರ ಪ್ರದೇಶ ನೀರು ಸರಬರಾಜುಗಾಗಿ ಹೆಚ್ಚಿನ ದರವನ್ನು ವಿಧಿಸಬಹುದಾಗಿದೆ ಎಂದು ಮುಖ್ಯ ಕಾರ್ಯದರ್ಶಿಯವರು ಅಭಿಪ್ರಾಯಪಟ್ಟರು. ಟೋಲ್ ಶುಲ್ಕ ಸಂಗ್ರಹಣೆಗಾಗಿ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಕಾರ್ಯತಂಡ ರಚಿಸಲು ಸಲಹೆ ನೀಡಲಾಯಿತು. ಮುಖ್ಯ ಕಾರ್ಯದರ್ಶಿಗಳು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ ಗಮನಕೊಟ್ಟು ಪರಿಶೀಲಿಸಿ, ವೈಯಕ್ತಿಕ, ಸಮುದಾಯ ಹಾಗೂ ಸಾರ್ವಜನಿಕ ಶೌಚಾಲಯಗಳ ಭೌತಿಕ ಪ್ರಗತಿಯನ್ನು ಪರಿಶೀಲಿಸಿ, ಬಾಕಿ

ಶೌಚಾಲಯ ಗುರಿಗಳನ್ನು ನಂತರದ ವರ್ಷಗಳಿಗೆ ತೆಗೆದುಕೊಂಡು ಪ್ರಸಕ್ತ ಸಾಲಿನ ಗುರಿಗಳನ್ನು ಪರಿಷ್ಕರಿಸಿಕೊಳ್ಳಲು ಸೂಚಿಸಿದರು.

ಘನತ್ಯಾಜ್ಯ ನಿರ್ವಹಣಾ ಯೋಜನೆಗಾಗಿ ಪೌರಾಡಳಿತ ನಿರ್ದೇಶನಾಲಯವನ್ನು ನಿಯಂತ್ರಣ ಸಂಸ್ಥೆಯಾಗಿ ಗುರುತಿಸಿರುವುದಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸಭಾಧ್ಯಕ್ಷರಿಗೆ ತಿಳಿಸಿದರು ಹಾಗೂ ನಗರ ಪ್ರದೇಶಗಳಲ್ಲಿ ಸಹ ಭೂಮಿಯನ್ನು ಗುರುತಿಸಿ ಪ್ರಗತಿ ಸಾಧಿಸಿರುವುದಾಗಿ ತಿಳಿಸಿದರು.

ಪೌರಾಡಳಿತ ನಿರ್ದೇಶನಾಲಯವು "Waste to Energy Policy" ಯ ತಯಾರಿಕೆಯನ್ನು ತ್ವರಿತಗೊಳಿಸಲು ತಿಳಿಸುತ್ತಾ, ಇದಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಕೂಡ ಒಪ್ಪಿಗೆ ಸೂಚಿಸಿದರು.

**ಮಾಹಿತಿ ತಂತ್ರಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ**

ಯೋಜನೆಗಳನ್ನು ಪರಿಶೀಲಿಸುತ್ತಾ, ರಾಜ್ಯದಲ್ಲಿ ಪ್ರತಿಯೊಂದು ಇಲಾಖೆಗಳು ಪ್ರತ್ಯೇಕವಾಗಿ ಮಾಹಿತಿ ವ್ಯವಸ್ಥೆ ಮಾಡುವ ಬದಲು ಈಗಾಗಲೇ ಉಚಿತವಾಗಿ ಲಭ್ಯವಿರುವ ಕೇಂದ್ರದ ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಬಳಸಿಕೊಂಡು ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಒಂದೇ ಭೌಗೋಳಿಕ ಮಾಹಿತಿ ವ್ಯವಸ್ಥೆ ಅಳವಡಿಸುವ ವ್ಯವಸ್ಥೆ ಮಾಡಲು ಸಲಹೆ ನೀಡಿದರು. ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ಚರ್ಚಿಸಲು ಸದಸ್ಯ ಕಾರ್ಯದರ್ಶಿ, ಜ್ಞಾನ ಆಯೋಗ ಇವರು ತನ್ನೊಂದಿಗೆ ಒಂದು ಸಭೆಯನ್ನು ಆಯೋಜಿಸುವಂತೆ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಸಭಾಧ್ಯಕ್ಷರು ತಿಳಿಸಿದರು. ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆಯ ನೋಡಲ್ ಅಧಿಕಾರಿಯಾಗಿ ಐಟಿಬಿಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ನೇಮಿಸಲಾಯಿತು.

**ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ**

ಸಭಾಧ್ಯಕ್ಷರು ಬಾಕಿ ಇರುವ ಎಲ್ಲಾ ಪ್ರಸ್ತಾವನೆಗಳನ್ನು ಹಾಗೂ ಬಳಕೆ ಪ್ರಮಾಣ ಪತ್ರಗಳನ್ನು ಭಾರತ ಸರ್ಕಾರಕ್ಕೆ ತ್ವರಿತವಾಗಿ ಕಳುಹಿಸಿಕೊಡಲು ಕಾರ್ಯೋನ್ಮುಖರಾಗುವಂತೆ ಸೂಚಿಸಿದರು. ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಗೆ ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಗಳು ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯ ಅರ್ಜಿಯನ್ನು ಸಂಯೋಜಿಸುವ ಕಾರ್ಯಕ್ಕೆ ಒಂದು ಅಂತರ ಸಂಪರ್ಕ ಸಾಧನ ಒದಗಿಸಬಹುದಾಗಿದೆ ಎಂದು ಸಲಹೆ ನೀಡಿದರು. ಪಿಟಿಸಿಎಲ್ ಹೊರತುಪಡಿಸಿದ ಎಲ್ಲಾ ಕಂದಾಯ ಭೂಮಿಯನ್ನು KIADB ಗೆ ಹಸ್ತಾಂತರಿಸುವ ಬಗ್ಗೆ ಸಂಪುಟ ಟಿಪ್ಪಣಿಯನ್ನು ಕಂದಾಯ ಇಲಾಖೆಯ ಮೂಲಕ ಕಳುಹಿಸಲು ತಿಳಿಸಿದರು. ಸಂಪುಟ ಮನ್ನಣೆ ಪಡೆದ ಎಲ್ಲಾ ಪ್ರಕರಣಗಳನ್ನು ಕೆಐಎಡಿಬಿ ಗೆ ಒಪ್ಪಿಸಲು ತಿಳಿಸಲಾಯಿತು ಮತ್ತು ಈ ನಿಟ್ಟಿನಲ್ಲಿ ಕ್ರಮಕೈಗೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಗೆ ಸೂಚಿಸಿದರು.

**ವಸತಿ ಇಲಾಖೆ**

ಇಂದಿರಾ ಆವಾಜ್ ಯೋಜನೆ (IAY) ಅಡಿಯಲ್ಲಿ ಘಟಕ ವೆಚ್ಚವನ್ನು ರೂ. 0.7 ಲಕ್ಷಗಳಿಂದ ರೂ. 1.5 ಲಕ್ಷ ಗಳಿಗೆ ಹೆಚ್ಚಿಸುವ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು, ವಸತಿ ಇಲಾಖೆ ಇವರು ಮಾಡಿದ ಪ್ರಸ್ತಾವನೆಗೆ ಸಭಾಧ್ಯಕ್ಷರು ರಾಜ್ಯದ ಎಲ್ಲಾ ವಸತಿ ರಹಿತ ಹಾಗೂ ನಿವೇಶನ ರಹಿತ ಜನರ ಸಮೀಕ್ಷೆ ಕೈಗೊಳ್ಳುವುದರ ಮೂಲಕ ನಕಲು ಮಾಡುವುದನ್ನು ತಡೆಯಬಹುದಾಗಿದೆ ಎಂದು ಸಲಹೆ ನೀಡಿದರು ಹಾಗೂ ಹೆಚ್ಚಿನ ಸದಸ್ಯರುಗಳನ್ನು ಇದರ ವ್ಯಾಪ್ತಿಗೆ ಒಳಪಡಿಸಲು ಸಿಎಸ್‌ಆರ್ ಬಳಸುವ ಸಾದ್ಯತೆಯನ್ನು ಅನ್ವೇಷಿಸಲು ಸೂಚಿಸಲಾಯಿತು.

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ**

ಯೋಜನೆಗಳ ಆರ್ಥಿಕ ಹಾಗೂ ಭೌತಿಕ ಪ್ರಗತಿಯನ್ನು ಪರಿಶೀಲಿಸಿದ ಸಭಾಧ್ಯಕ್ಷರು ತೃಪ್ತಿ ವ್ಯಕ್ತಪಡಿಸಿದರು. ಆದರೆ ಎನ್‌ಆರ್‌ಎಲ್‌ಎಂ ಅಡಿಯಲ್ಲಿ ಪ್ರಗತಿಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ತಿಳಿಸಿದರು. ಕೇಂದ್ರ ಸರ್ಕಾರದಿಂದ ಬಾಕಿ ಉಳಿದ ಅನುದಾನದ ಬಿಡುಗಡೆಗೆ ಬಳಕೆ ಪ್ರಮಾಣ ಪತ್ರವನ್ನು ಕೂಡಲೇ ಸಲ್ಲಿಸಲು ಸೂಚಿಸಿದರು. ಎನ್‌ಆರ್‌ಡಿಡಬ್ಲ್ಯೂಪಿ ಅಡಿಯಲ್ಲಿಯ ಬಹು ಗ್ರಾಮೀಣ ಯೋಜನೆಗೆ ಲಭ್ಯವಿರುವ ಅನುದಾನ ಆಧರಿಸಿ ಶ್ರೇಡಿ ಮತ್ತು ಪುನರಾದ್ಯತೆ ಮೇರೆಗೆ ಕಾರ್ಯ ನಿರ್ವಹಿಸಲು ಸೂಚಿಸಿದರು. ಮಹತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾಯ್ದೆಯಡಿಯ ಯೋಜನೆಯ ಅನುಷ್ಠಾನವನ್ನು ಪರಿಶೀಲಿಸಿದ ಸಭಾಧ್ಯಕ್ಷರು ವಿಶೇಷವಾಗಿ ಕೆಲವು ಜಿಲ್ಲೆಗಳಲ್ಲಿ ನಿಧಾನಗತಿಯಲ್ಲಿ ಪ್ರಗತಿಯಾಗುತ್ತಿರುವ ಬಗ್ಗೆ ವಿಚಾರಣೆ ನಡೆಸಿದರು ಹಾಗೂ ಜಿಲ್ಲಾ ಆಡಳಿತದೊಂದಿಗೆ ವಿಡಿಯೋ ಸಮ್ಮೇಳನ ನಡೆಸುವ ಮೂಲಕ ಯೋಜನೆಯ ಅನುಷ್ಟಾನದಲ್ಲಿ ಉಂಟಾಗಿರುವ ಮಂದ ಪ್ರಗತಿಗೆ ಕಾರಣಗಳನ್ನು ಕಂಡುಕೊಳ್ಳಲು ತಿಳಿಸಿದರು. ನೆರೆ ರಾಜ್ಯ ಆಂಧ್ರ ಪ್ರದೇಶದ ಮಾದರಿಯಲ್ಲಿಯೇ ರೈತರ ಆತ್ಮ ಸ್ಥೈರ್ಯವನ್ನು ಹೆಚ್ಚಿಸಲು ಒಂದು ಸಮಗ್ರ ಯೋಜನೆಯನ್ನು ರೂಪಿಸಿಕೊಳ್ಳುವಂತೆ ಸೂಚಿಸಿದರು. ಕ್ಷೇತ್ರ ಇಲಾಖೆಗಳೊಂದಿಗೆ ಸದರಿ ಯೋಜನೆಯ ಕಾರ್ಯಕ್ಷಮತೆಯನ್ನು ಪರಿಶೀಲಿಸಲು ಅಭಿವೃದ್ಧಿ ಆಯುಕ್ತರು ಸಭೆಯನ್ನು ನಡೆಸುವ ಬಗ್ಗೆ ನಿರ್ಧರಿಸಲಾಯಿತು.

**ಕೃಷಿ ಇಲಾಖೆ**

ಕೃಷಿ ಭಾಗ್ಯ ಯೋಜನೆಯಡಿ ಆರ್ಥಿಕ ಪ್ರಗತಿಯನ್ನು ಪರಿಶೀಲಿಸುತ್ತಾ, ಪ್ರಗತಿಯನ್ನು ಉತ್ತಮಗೊಳಿಸಿ ಅನುದಾನವನ್ನು ವೆಚ್ಚ ಮಾಡಲು ಅನುಕೂಲವಾಗುವಂತೆ ಯೋಜನೆಯನ್ನು ಸರಳೀಕರಿಸುವ ಅಗತ್ಯವಿದೆ ಎಂದು ಸಭಾಧ್ಯಕ್ಷರು ಸಲಹೆ ನೀಡಿದರು

**ತೋಟಗಾರಿಕೆ ಇಲಾಖೆ**

ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮಾತನಾಡುತ್ತಾ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಸೇರಿದಂತೆ ಇತರೆ ಯೋಜನೆಗಳಿಗೆ ರಿಯಾಯತಿ ಹಾಗೂ ಘಟಕಗಳ ಪುನರ್‌ರಚನೆ ಮುಂತಾದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಂಪುಟ ಟಿಪ್ಪಣಿ ತಯಾರಿಸಿ ಸಲ್ಲಿಸಲು ಸಲಹೆ ನೀಡಿದರು.

ಭಾರತ ಸರ್ಕಾರದ ಮಾರ್ಗಸೂಚಿಯಲ್ಲಿ ಶೇ.50 ರಷ್ಟು ಸಬ್ಸಿಡಿ ನಿಗಧಿಯಾಗಿರುವ ಕೇಂದ್ರ ಪುರಸ್ಕೃತ ಯೋಜನೆಗಳಾದ NHM (ರೂ. 28.14 ಕೋಟಿ) ಮತ್ತು RKVY (ರೂ. 5.69

ಕೋಟಿ) ಕಾರ್ಯಕ್ರಮಗಳಿಗೆ ರಾಜ್ಯ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ಪರಿಷತ್ತು ಶೇ. 90 ರಷ್ಟು ಸಬ್ಸಿಡಿ ಕೊಡಲು ತೀರ್ಮಾನಿಸಿರುವುದರಿಂದ ಸದರಿ ಕಾರ್ಯಕ್ರಮಗಳಿಗೆ ಸಮಾಜ ಕಲ್ಯಾಣ ಇಲಾಖೆಯು ಹೆಚ್ಚುವರಿ ಆಯವ್ಯಯವಾಗಿ ರೂ. 36.86 ಕೋಟಿಗಳನ್ನು ಬಿಡುಗಡೆಮಾಡುವಂತೆ ಸಭಾದ್ಯಕ್ಷರು ಸಮಾಜ ಕಲ್ಯಾಣ ಇಲಾಖೆಗೆ ನಿರ್ದೇಶಿಸಿದರು.

ಈ ಅನುದಾನವನ್ನು ನೀರಾವರಿ ಇಲಾಖೆಗೆ ನಿಗಧಿಪಡಿಸಿದ್ದ ಅನುದಾನದಲ್ಲಿ ತಿರುಗಿಸ ಬಹುದಾಗಿದೆ. ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಸೇರಿ ಇಂಧನ ಇಲಾಖೆಯ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಬೇಕೆಂಬ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳ ಪ್ರಸ್ತಾವನೆಗೆ ಸಭಾದ್ಯಕ್ಷರು ಒಪ್ಪಿಗೆ ಸೂಚಿಸಿದರು.

**ಆರೋಗ್ಯ ಇಲಾಖೆ**

ಆರ್ಥಿಕ ಪ್ರಗತಿಯನ್ನು ಪರಿಶೀಲಿಸಿದ ಸಭಾಧ್ಯಕ್ಷರು, ನಿಗಧಿಪಡಿಸಿದ ಅನುದಾನಕ್ಕೆ ಶೇ. 40ರಷ್ಟು ಮಾತ್ರ ಖರ್ಚುಮಾಡಲಾಗಿದ್ದು, ಭೌತಿಕ ಗುರಿಗಳನ್ನು ಸಾಧಿಸುವುದರೊಂದಿಗೆ ಆರ್ಥಿಕ ಪ್ರಗತಿ ಸಾಧಿಸುವಂತೆ ಸಲಹೆ ಮಾಡಿದರು.

**ಪ್ರಾಥಮಿಕ ಶಿಕ್ಷಣ ಇಲಾಖೆ**

ಪ್ರಾಥಮಿಕ ಶಿಕ್ಷಣ ಇಲಾಖೆಯ ಯೋಜನೆಗಳ ಪ್ರಗತಿಯನ್ನು ಸಭಾದ್ಯಕ್ಷರು ಪರಿಶೀಲಿಸಿದರು. ಮಾಹಿತಿ ಮತ್ತು ಸಂವಹನ ತಾಂತ್ರಿಕತೆ–3 (ಐಸಿಟಿ–3) ಮುಂದಕ್ಕೆ ಸಾಗಲು ಸಭೆಗಳನ್ನು ಆಯೋಜಿಸಿಕೊಳ್ಳುವಂತೆ ತಿಳಿಸಲಾಯಿತು. ರಾಷ್ಟ್ರೀಯ ಮಾದ್ಯಮಿಕ ಶಿಕ್ಷಣ ಅಭಿಯಾನದಡಿಯಲ್ಲಿ ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದ ಭೌತಿಕ ಪ್ರಗತಿಯ ಸ್ಪಷ್ಟೀಕರಣ ವರದಿಯನ್ನು ಕೋರಿದ ಸಭಾಧ್ಯಕ್ಷರು ವರದಿಯನ್ನು 15 ದಿನದೊಳಗೆ ಸಲ್ಲಿಸುವಂತೆ ತಿಳಿಸಿದರು.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**

ಪ್ರಗತಿಯನ್ನು ಪರಿಶೀಲಿಸುತ್ತಾ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಹಿಂದೆ ಇದ್ದ 90:10 ಕೇಂದ್ರ ಮತ್ತು ರಾಜ್ಯದ ಪಾಲನ್ನು 60:40 ಕ್ಕೆ ಕಡಿತಗೊಳಿಸಿರುವ ಅನುದಾನದ ವಿನ್ಯಾಸದ ಬಗ್ಗೆ ಇಲಾಖೆಯು ಕೇಂದ್ರ ಸರ್ಕಾರದೊಂದಿಗೆ ಹಿಂಬಾಲಿಸಿ ವ್ಯವಹರಿಸುವಂತೆ ಸಭಾದ್ಯಕ್ಷರು ಸೂಚಿಸಿದರು.

**ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ**

ಅನ್ನಭಾಗ್ಯ ಯೋಜನೆಯನ್ನು ಪರಿಶೀಲಿಸುತ್ತಾ, ಸಭಾಧ್ಯಕ್ಷರು ಫಲಾನುಭವಿಗಳ ಆಯ್ಕೆಯ ಪ್ರಕ್ರಿಯೆಯಲ್ಲಿ input proforma ವನ್ನು ಪರಿಷ್ಕರಿಸಲು ತಿಳಿಸಿದರು. ಭಾರತೀಯ ಆಹಾರ ನಿಗಮದಲ್ಲಿನ ಆನ್‌ಲೈನ್ ವ್ಯವಹರಣೆ ವ್ಯವಸ್ಥೆಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಭಾರತ ಆಹಾರ ನಿಗಮದ ಪ್ರಾದೇಶಿಕ ಅಧಿಕಾರಿ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರೊಂದಿಗೆ ಸಭೆ ಆಯೋಜಿಸುವಂತೆ ತಿಳಿಸಲಾಯಿತು.

**ಇತರೆ ವಿಷಯಗಳು**

ಪರಿಶಿಷ್ಟಜಾತಿ ಉಪಯೋಜನೆ/ಗಿರಿಜನ ಉಪಯೋಜನೆ, ವಿಶೇಷ ಅಭಿವೃದ್ಧಿ ಯೋಜನೆ, ಎಲ್ಲರಿಗಾಗಿ ಸೂರು (housing for all) ಮತ್ತು ಸಾಮಾಜಿಕ ಭದ್ರತೆ ಹಾಗೂ ಪಿಂಚಣಿ ವಲಯಗಳನ್ನು ಮುಖ್ಯ ಮಂತ್ರಿಗಳ ಪರಿಶೀಲನಾ ಸಭೆಯಲ್ಲಿ ಸೇರಿಸುವಂತೆ ನಿರ್ಧರಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಪಿಡಿ 118 ಐಎಂಎಂ 2015**

**ಮುಖ್ಯ ಕಾರ್ಯದರ್ಶಿ**
**ಕರ್ನಾಟಕ ಸರ್ಕಾರ**